# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

## ಸಿ.ಸಿ.ನಂ *990/2018*

## ದಿನಾಂಕಃ*30*ನೇ ಡಿಸೆಂಬರ್ *2019*

**ಪಿರ್ಯಾದಿ** ಃ ಪುರುಶೋತ್ತಮ ಬಿನ್ ಮರಳಿಗೌಡ,
*42* ವರ್ಷ, ವ್ಯವಸಾಯ,
ವಾಸ ಬರಗೇನಹಳ್ಳಿ ಗ್ರಾಮ,
ಮತ್ತು ಅಂಚೆ, ಲಕ್ಕವಳ್ಳಿ ಹೋಬಳಿ,
ತರೀಕೆರೆ ತಾಲ್ಲೂಕು.

**-ವಿರುದ್ಧ-**

**ಆರೋಪಿ/ತರುಃ** ಯೋಗಾನಂದ ಬಿನ್ ಸಿಂಗಾರಿಗೌಡ,
*48* ವರ್ಷ, ವ್ಯಾಪಾರ,
ವಾಸ *1*ನೇ ಕ್ರಾಸ್ ಉಜ್ಜನಿಪುರ,
ಬೈಪಾಸ್ ಗಣಪತಿ ದೇವಸ್ಥಾನದ
ಹತ್ತಿರ, ಪೇಪರ್ ಟೌನ್,
ಭದ್ರಾವತಿ, ಶಿವಮೊಗ್ಗ ಜಿಲ್ಲೆ.

## -ಃಆ ರೋ ಪ ಣೆಃ-

ದಿನಾಂಕಃ*15/04/2018*ರಂದು ಆರೋಪಿಯಾದ ನೀವು ಚಾಸಾ.*1*ರವರ ಹತ್ತಿರ ಸಾಲವನ್ನು ತೆಗೆದುಕೊಂಡಿದ್ದು, ಸದರಿ ಸಾಲದ ಮರುಪಾವತಿಗಾಗಿ ಆರೋಪಿಯಾದ ನೀವು ದಿಃ *16/10/2018*ರ ಕೆನರಾ ಬ್ಯಾಂಕ್, ಭದ್ರಾವತಿ ಮುಖ್ಯ ಶಾಖೆಗೆ ಸೇರಿದ ಚೆಕ್ ನಂ.*371348* ಸಂಖ್ಯೆಯ *7,50,000/-* ರೂ.ಗಳ ಒಂದು ಚೆಕ್ಕನ್ನು ನೀಡಿದ್ದು, ಸದರಿ ಚೆಕ್ಕನ್ನು ಚಾಸಾ.*1*ರವರು ವಿಜಯ ಬ್ಯಾಂಕ್ ರಂಗೇನಹಳ್ಳಿ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಸದರಿ ಚೆಕ್ಕು ಆರೋಪಿಯಾದ ನಿಮ್ಮ ಖಾತೆಯಲ್ಲಿ **ಸಾಕಷ್ಟು ಹಣವಿಲ್ಲ** ಎಂಬ ಕಾರಣಕ್ಕಾಗಿ ಅಮಾನ್ಯಗೊಂಡಿರುತ್ತದೆ. ಚಾಸಾ.*1*ರವರು ವಕೀಲರ ಮೂಲಕ ನೋಟೀಸ್ ನೀಡಿದ್ದರೂ ಸಹ ಯಾವುದೇ

ಹಣ ಹಿಂದಿರುಗಿಸಿರುವುದಿಲ್ಲ, ಆದ್ದರಿಂದ ಆರೋಪಿಯಾದ ನೀವು ಕಲಂ *138* ಎನ್.ಐ. ಆ್ಯಕ್ಟನ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ.

ನೀವು ಸದರಿ ಆರೋಪ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರಶ್ನೆ *1)* ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರಾ*?*

ಉತ್ತರಃ-

ಪ್ರಶ್ನೆ *2)* ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ*?*

ಉತ್ತರಃ-

***ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ನಾನೇ ಸ್ವತಃ ಯಥಾವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.***

ಸಹಿ/-
(ರಾಮಮೂರ್ತಿ ಎನ್.)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ತರೀಕೆರೆ.